# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

NAAC Accredited with "A" Grade-2014

ಪ್ರಸಾರಾಂಗ ವಿಭಾಗ

ದೂರವಾಣಿ : 0836-2215285

ಪಾವಟೆ ನಗರ ಧಾರವಾಡ-೫೮೦ ೦೦೩


ಕವಿವಿ/ಪ್ರಸಾರಾಂಗ/2026-2027/ 31 **: ಸುತ್ತೋಲೆ :** ದಿನಾಂಕ : 08-05-2026

## ಕ.ವಿ.ವಿ. ನಿಯತಕಾಲಿಕೆಗೆ ಹಾಗೂ ಕೃತಿಗಳಿಗೆ ಲೇಖನಗಳ ಆಹ್ವಾನ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸ್ನಾತಕೋತ್ತರ ವಿಭಾಗ, ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಅಧ್ಯಾಪಕರ/ವಿದ್ಯಾರ್ಥಿಗಳ ಗಮನಕ್ಕೆ ತರಬಯಸುವುದೇನೆಂದರೆ ಕರ್ನಾಟಕ ವಿಶ್ವವಿದ್ಯಾಲಯದ ನಿಯತಕಾಲಿಕೆಗಳಿಗೆ ಸಂಶೋಧನಾತ್ಮಕ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ನಿರ್ದೇಶಕರು ಪ್ರಸಾರಾಂಗ ಕ.ವಿ.ವಿ.ಧಾರವಾಡ ಇವರಿಗೆ ದಿನಾಂಕ 10-06-2026 ರೊಳಗಾಗಿ ಲೇಖನ/ಕೃತಿಗಳನ್ನು ಕಳಿಸಲು ಕೋರಲಾಗಿದೆ.

| | | |
|---|---|---|
| 1 | ಕರ್ನಾಟಕ ಭಾರತಿ (ಕನ್ನಡ) – ವಾರ್ಷಿಕ ಸಂಚಿಕೆ | ಸಂಶೋಧನಾತ್ಮಕ ಲೇಖನ/ಪುಸ್ತಕ ವಿಮರ್ಶೆ |
| 2 | ವಿದ್ಯಾರ್ಥಿ ಭಾರತಿ (ಕನ್ನಡ) – ವಾರ್ಷಿಕ ಸಂಚಿಕೆ | ಸಂಶೋಧನಾ ಲೇಖನ/ಕತೆ/ಕವಿತೆ ವಿದ್ಯಾರ್ಥಿಗಳಿಗೆ ಮಾತ್ರ |
| 3 | ಕೆ.ಯು.ಜರ್ನಲ್ ಆಫ್ ಹ್ಯೂಮ್ಯಾನಿಟೀಸ್ – ವಾರ್ಷಿಕ ಸಂಚಿಕೆ | ಇಂಗ್ಲೀಷ್/ಹಿಂದಿ/ಮರಾಠಿ/ಸಂಸ್ಕೃತ/ಉರ್ದು/ಇತರೆ ಭಾಷೆಗಳ ಸಂಶೋಧನಾತ್ಮಕ ಲೇಖನ |
| 4 | ಕೆ.ಯು.ಜರ್ನಲ್ ಆಫ್ ಸೋಶಿಯಲ್ ಸಾಯನ್ಸ್ – ವಾರ್ಷಿಕ ಸಂಚಿಕೆ | ಈ ವಿಷಯಕ್ಕೆ ಸಂಬಂಧಿಸಿದ ಸಂಶೋಧನಾತ್ಮಕ ಲೇಖನಗಳು ಇಂಗ್ಲೀಷ್ ಭಾಷೆಯಲ್ಲಿರಬೇಕು. |
| 5 | ಕೆ.ಯು.ಜರ್ನಲ್ ಆಫ್ ಸಾಯನ್ಸ್ – (ಇ-ಜರ್ನಲ್) | |

**2026-27** ನೇ ಸಾಲಿನ ಮೇಲಿನ ನಿಯತಕಾಲಿಕೆಗಳಲ್ಲಿ ಪ್ರಕಟಿಸಲು ಅನುಕೂಲವಾಗುವಂತೆ ಲೇಖನಗಳನ್ನು **6** ರಿಂದ **10** ಪುಟಗಳ ಮಿತಿಯಲ್ಲಿ ಸಿದ್ಧಪಡಿಸಿ, ಪ್ರಸಾರಾಂಗಕ್ಕೆ ತಲುಪುವಂತೆ ಕಳಿಸುವುದು.

- ಕೆ.ಯು.ಜರ್ನಲ್ ಆಫ್ ಹ್ಯೂಮ್ಯಾನಿಟೀಜ್ ನಿಯತಕಾಲಿಕೆ ಲೇಖನ **A/4 Size** ನಲ್ಲಿ ಸಿದ್ಧಪಡಿಸಿ ಸಿ.ಡಿ. ಹಾಗೂ ಹಾರ್ಡ ಪ್ರತಿಯಲ್ಲಿ ಲೇಖನ ಕಳಿಸುವುದು.
- ಸೋಶಿಯಲ್ ಸಾಯನ್ಸ್ ಮತ್ತು ಸಾಯನ್ಸ್ ನಿಯತಕಾಲಿಕೆಗಳ ಲೇಖನಗಳನ್ನು **Box Formet** ನಲ್ಲಿ ಸಿದ್ಧಪಡಿಸಿ ಲೇಖಕರು ಲೇಖನಗಳ ಸಿ.ಡಿ. ಜೊತೆ ಒಂದು ಹಾರ್ಡ ಪ್ರತಿಯನ್ನು ಕಳಿಸಿಕೊಡುವುದು.
- ಕರ್ನಾಟಕ ಭಾರತಿ, ವಿದ್ಯಾರ್ಥಿ ಭಾರತಿ ನಿಯತಕಾಲಿಕೆಗಳಿಗೆ ಲೇಖನ ಕಳಿಸುವವರು ತಮ್ಮ ಲೇಖನವನ್ನು ನುಡಿಲಿಪಿ (ಪೇಜ್‌ಮೇಕರ್-ಬುಕ್ ಫಾರ್ಮೆಟ್‌ಗೆ) ಸಿದ್ಧಪಡಿಸಿ ಸಿ.ಡಿ. ಜೊತೆ ಒಂದು ಹಾರ್ಡ ಪ್ರತಿಯನ್ನು ಕಳಿಸಬೇಕು.
- ಸದರಿ ನಿಯತಕಾಲಿಕೆಗಳು **ISSN & Refereed Journal** ಆಗಿರುವುದರಿಂದ ಲೇಖನಗಳನ್ನು ವಿಷಯಕ್ಕೆ ಸಂಬಂಧಿಸಿದ ಪರಿಣಿತರಿಂದ ಪರಿಶೀಲಿಸಿ ಪ್ರಕಟಣೆಗೆ ಯೋಗ್ಯವಾದವುಗಳನ್ನು ಮಾತ್ರ ಪ್ರಕಟಿಸಲಾಗುವುದು. ಅಸ್ವೀಕೃತ ಲೇಖನಗಳನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಆ ಬಗ್ಗೆ ಪತ್ರ ವ್ಯವಹಾರ ಮಾಡಲಾಗುವುದಿಲ್ಲ.
- ನಿಯತಕಾಲಿಕೆಗಳಿಗೆ ಲೇಖನ ಕಳಿಸುವವರು ಲೇಖನದ ಜೊತೆ ಕೃತಿಚೌರ್ಯ ವರದಿಯನ್ನು **(Plagiarism Report)** ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಮತ್ತು ಲೇಖನ ಸಂಬಂಧಿಸಿ ದೂರು ಅಥವಾ ಆಕ್ಷೇಪಣೆಗಳು ಬಂದಲ್ಲಿ ಲೇಖಕರೇ ಹೊಣೆಗಾರರಾಗಿರುತ್ತಾರೆ.
- ಕೆ.ಯು.ಜರ್ನಲ್ ಆಫ್ ಸಾಯನ್ಸ್ ನಿಯತಕಾಲಿಕೆಯನ್ನು ಇ-ಜರ್ನಲ್ ಆಗಿ ವೆಬ್‌ಸೈಟ್ ಮೂಲಕ ಪ್ರಕಟಿಸಲಾಗುತ್ತದೆ.
- ತಿರಸ್ಕೃತವಾದ ಲೇಖನಗಳಿಗೆ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ. ಹಾಗೂ ಇಲ್ಲಿ ಪ್ರಕಟಿತ ಲೇಖನಗಳು **R.T.I.** ವ್ಯಾಪ್ತಿಗೆ ಒಳಪಡುವುದಿಲ್ಲ.

**2026-27** ನೇ ಸಾಲಿಗೆ ಸಂಬಂಧಿಸಿದಂತೆ ಸಂಶೋಧನಾ ಕೃತಿ, ಕಥೆ, ಕಾದಂಬರಿ, ನಾಟಕ ಸಾಹಿತ್ಯಕ್ಕೆ ಸಂಬಂಧಿಸಿದಂತ ಕೃತಿಗಳನ್ನು ಪ್ರಸಾರಾಂಗದಿಂದ ಪ್ರಕಟಿಸಲು ಆಸಕ್ತವುಳ್ಳವರು ಹಸ್ತಪ್ರತಿಯನ್ನು ಬುಕ್‌ಫಾರ್ಮೆಟ್‌ನಲ್ಲಿ ಸಿದ್ಧಪಡಿಸಿ ಸಿ.ಡಿ.ಯೊಂದಿಗೆ ಸಲ್ಲಿಸುವುದು. ವಿಶ್ವವಿದ್ಯಾಲಯದ ನಿಯಮಾನುಸಾರ ಪರಿಶೀಲನೆಗೊಳಪಡಿಸಿದ ನಂತರ ಪ್ರಕಟಣೆಗೆ ಕೈಗೆತ್ತಿಕೊಳ್ಳಲಾಗುವುದು. ತಿರಸ್ಕೃತ ಪುಸ್ತಕಗಳಿಗೆ ಪತ್ರ ವ್ಯವಹಾರಕ್ಕೆ ಅವಕಾಶ ಇರುವುದಿಲ್ಲ.

. ಹೆಚ್ಚಿನ ಮಾಹಿತಿಗಾಗಿ ಡಾ.ಸಿದ್ದಪ್ಪ ಎನ್. ಸಹಾಯ ನಿರ್ದೇಶಕರು, ಪ್ರಸಾರಾಂಗ ವಿಭಾಗ, ಕ.ವಿ.ವಿ.ಧಾರವಾಡ ಮೊ.ನಂ. **9480295866** ಸಂಪರ್ಕಿಸಬಹುದಾಗಿದೆ.

ನಿರ್ದೇಶಕರು
Awolale 08/05/2026
ಪ್ರಸಾರಾಂಗ

ಪ್ರತಿ : 1) ಮುಖ್ಯಸ್ಥರು ಎಲ್ಲಾ ಸ್ನಾತಕೋತ್ತರ ವಿಭಾಗಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

2) ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಕಕ್ಷೆಯಲ್ಲಿ ಬರುವ ಎಲ್ಲ ಅಧೀನ/ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ

3) ನಿರ್ದೇಶಕರು, ಐ.ಟಿ.ವಿಭಾಗ, ಕ.ವಿ.ವಿ.ಧಾರವಾಡ (ಸುತ್ತೋಲೆಯನ್ನು ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡಲು ಕೋರಿದೆ.)